ಸಿಸಿ ಸಂಖ್ಯೆ: 2143/2022

ಚಾ.ಸಾ–1, ಪ್ರಾ.ಸಾ–1

**ದಿನಾಂಕ 22.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದಃ**

ಸದರಿ ಟೋಪಿ ಮತ್ತು ಕಬ್ಬಿಣದ ಸರಳನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳು ಈಗಾಗಲೇ ಕ್ರಮವಾಗಿ ಎಂ.ಒ.3 ಮತ್ತು 1 ಎಂದು ಗುರುತಿಸಲ್ಪಟ್ಟಿವೆ.

**ಪಾಟೀ ಸವಾಲು : ಶ್ರೀ ಎಂ.ಆರ್. ವಕೀಲರಿಂದ ಆರೋಪಿ ಪರವಾಗಿ :**

ನಾನು ಚೌಡೇಶ್ವರಿ ದೇವಸ್ಥಾನದಲ್ಲಿ ಅರ್ಚಕಿಯಾಗಿದ್ದೇನೆ. ಸದರಿ ದೇವಸ್ಥಾನಕ್ಕೆ ಯಾವುದೇ ಸಮಿತಿಯಿಲ್ಲ. ಆ ದೇವಸ್ಥಾನಕ್ಕೆ ನಾನೊಬ್ಬಳೇ ಅರ್ಚಕಿಯಾಗಿರುತ್ತೇನೆ. ಪ್ರತಿದಿನ ಬೆಳಿಗ್ಗೆ 8.00 ಗಂಟೆಯೊಳಗೆ ದೇವಸ್ಥಾನದ ಬಾಗಿಲನ್ನು ತೆಗೆಯುತ್ತೇನೆ. ಪ್ರತಿದಿನ ದೇವಸ್ಥಾನದ ಬಾಗಿಲನ್ನು ನಾನೇ ತೆಗೆಯುತ್ತೇನೆ, ಬೇರೆ ಯಾರೂ ತೆಗೆಯುವುದಿಲ್ಲ.

ಸದರಿ ದೇವಸ್ಥಾನದಲ್ಲಿ ಯಾರು ಕಳ್ಳತನ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಪೊಲೀಸರು ದೂರು ನೀಡಲು ಹೇಳಿದ್ದರಿಂದ ನಾನು ದೂರನ್ನು ನೀಡಿರುತ್ತೇನೆ ಎಂದರೆ ಸರಿ. ಆರೋಪಿತನನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ

ನೋಡಿರುತ್ತೇನೆ ಎಂದರೆ ಸರಿ. ದೂರನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಹಾಗಾಗಿ ಅದಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿ.

ಪೊಲೀಸರಿಗೆ ಅನುಕೂಲವಾಗುವ ರೀತಿಯಲ್ಲಿ ದೂರನ್ನು ಬರೆದುಕೊಂಡಿದ್ದು, ಅದಕ್ಕೆ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಂಚನಾಮದ ವೇಳೆಗೆ ನಾನು, ಪೊಲೀಸರು ಮತ್ತು ಊರಿನವರು ಇದ್ದರು. ಆ ಊರಿನವರ ಹೆಸರುಗಳು ನನಗೆ ಗೊತ್ತಿಲ್ಲ. ಪಂಚನಾಮದ ವಿವರಗಳನ್ನು ಪೊಲೀಸರು ನನಗೆ ಓದಿ ಹೇಳಿಲ್ಲ ಎಂದರೆ ಸರಿ.

ಎಂಒ.1 ರ ಸರಳು ಹೊಸ ಸರಳು ಎಂದರೆ ಸರಿಯಲ್ಲ. ಆ ರೀತಿಯ ಸರಳು ಗುಜರಿ ಅಂಗಡಿಯಲ್ಲಿ ಸಿಗಬಹುದು ಎಂದರೆ ಸರಿ. ಸದರಿ ಸರಳು ಮತ್ತು ಟೋಪಿಯನ್ನು ದೇವಸ್ಥಾನದಲ್ಲಿ ಯಾರು ಹಾಕಿದ್ದರು ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**
**ತಿ.ನರಸೀಪುರ**